# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : **1666**

ಸದಸ್ಯರ ಹೆಸರು : ಶ್ರೀ ಪಿ. ಆರ್. ರಮೇಶ್

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 20-03-2020

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಎಲ್ಲಾ ತರಹದ ವಾಹನಗಳು ಪರಿಸರ ಹಾಳು ಮಾಡುವ ಹಾಗೂ ಆರೋಗ್ಯಕ್ಕೆ ಹಾನಿಕರವಾದ ಹೊಗೆಬಿಡುವುದು (ಕಾರ್ಬನ್ ಮೋನಾಕ್ಸೈಡ್) ಯಥೇಚ್ಛವಾಗಿದ್ದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಸಾರಿಗೆ ಇಲಾಖೆ ಹಾಗೂ ಪರಿಸರ ಮಾಲಿನ್ಯ ಮಂಡಳಿ ಯಾವ ಕ್ರಮಗಳನ್ನು ಕೈಗೊಂಡಿವೆ: | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ನಗರದಲ್ಲಿ 20 ಸ್ಥಳಗಳಲ್ಲಿ ವಾಯುಗುಣಮಟ್ಟ ಮಾಪನವನ್ನು ಮಾಡುತ್ತಿದ್ದು, 2018-19 ನೇ ಸಾಲಿನ ವರದಿಯ ಪ್ರಕಾರ ಬೆಂಗಳೂರು ನಗರದಲ್ಲಿ ಧೂಳಿನ ಕಣಗಳ ವಾರ್ಷಿಕ ಸರಾಸರಿ ಪ್ರಮಾಣ 90.0 $\mu g/m^3$ (Microgram per meter cube) ಇದ್ದು ರಾಷ್ಟ್ರೀಯ ಮಿತಿಗಿಂತ (60.0 $\mu g/m^3$) ಹೆಚ್ಚಾಗಿರುವುದು ಕಂಡು ಬಂದಿದೆ. ಆದರೆ, ಕಾರ್ಬನ್ ಮೋನಾಕ್ಸೈಡ್ ವಾರ್ಷಿಕ ಸರಾಸರಿ ಪ್ರಮಾಣ 1.0 $mg/m^3$ (Milligram per meter cube) ಇದ್ದು ರಾಷ್ಟ್ರೀಯ ಮಿತಿಗಿಂತ (2.0 $mg/m^3$) ಕಡಿಮೆ ಇರುತ್ತದೆ.<br><br>ಮಾನ್ಯ ಹಸಿರು ನ್ಯಾಯ ಪೀಠದ ಆದೇಶ O.A No. 681/2018 ದಿನಾಂಕ:8.10.2018 ರಂತೆ ಬೆಂಗಳೂರು ನಗರವು ಸೇರಿ ಒಟ್ಟು ರಾಜ್ಯದಲ್ಲಿ ಒಟ್ಟು 4 ನಗರಗಳನ್ನು ವಾಯು ಮಾಲಿನ್ಯದ ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿರುವ ನಗರಗಳೆಂದು ಘೋಷಿಸಲಾಗಿದೆ. ಅದರಂತೆ ಬೆಂಗಳೂರು ನಗರದಲ್ಲಿನ ವಾಯು ಮಾಲಿನ್ಯವನ್ನು ಕಡಿಮೆ ಮಾಡಲು 44 ಅಂಶಗಳ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಲಾಗಿದೆ, ಈ ಅಂಶಗಳಲ್ಲಿ ವಾಹನಗಳಿಂದಾಗುವ ಮಾಲಿನ್ಯವನ್ನು ಕಡಿಮೆ ಮಾಡಲು 14 ಅಂಶಗಳನ್ನು ರೂಪಿಸಲಾಗಿದೆ. ಈ ಅಂಶಗಳನ್ನು ಸಂಬಂಧಪಟ್ಟ ಇಲಾಖೆಗಳು ಅನುಷ್ಠಾನಗೊಳಿಸುತ್ತಿವೆ.<br><br>ವಾಹನಗಳು ಹೊರಸೂಸುವ ಹೊಗೆಯನ್ನು ಮಾಪನ ಮಾಡಲು ಸುಸಜ್ಜಿತ ಉಪಕರಣಗಳನ್ನೊಳಗೊಂಡ ಹನ್ನೆರಡು ಹೊಗೆ ಮಾಪನ ಮಾಡುವ ಸಂಚಾರಿ ವಾಹನಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಖರೀದಿಸಿದ್ದು, ಈ ಹನ್ನೆರಡು ವಾಹನಗಳ ಪೈಕಿ ಆರು ವಾಹನಗಳನ್ನು ಬೆಂಗಳೂರು ನಗರಕ್ಕೆ ಹಂಚಿಕೆ ಮಾಡಲಾಗಿದೆ. ಈ ವಾಹನಗಳನ್ನು ಮಂಡಳಿ, ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಬಿ.ಎಂ.ಟಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗಳ ಅಧಿಕಾರಿಗಳನ್ನೊಳಗೊಂಡು ಜಂಟಿ ತಪಾಸಣೆ ಕಾರ್ಯಾಚರಣೆ ಮಾಡಲು ಬಳಸಲಾಗುತ್ತಿದೆ. |

--2

ವಾಯುಮಾಲಿನ್ಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಂಬಂಧ ಪ್ರತಿ ವರ್ಷ ನವೆಂಬರ್ ಮಾಹೆಯನ್ನು ವಾಯುಮಾಲಿನ್ಯ ನಿಯಂತ್ರಣ ಜಾಗೃತಿ ಮಾಸವನ್ನಾಗಿ ರಾಜ್ಯಾದ್ಯಂತ ಸಾರಿಗೆ ಇಲಾಖೆಯ ವತಿಯಿಂದ ಆಚರಿಸಲಾಗುತ್ತಿದೆ.

ರಸ್ತೆಯ ಮೇಲೆ ಸಂಚರಿಸುವ ವಾಹನಗಳಿಂದ ಉಂಟಾಗುವ ವಾಯುಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರಿಗೆ ಇಲಾಖೆಯು ರಾಜ್ಯಾದ್ಯಂತ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಪ್ರವರ್ತನ ಕಾರ್ಯವನ್ನು ಕಾಲಕಾಲಕ್ಕೆ ಹಮ್ಮಿಕೊಂಡು, ಹೆಚ್ಚು ವಾಯುಮಾಲಿನ್ಯ ಉಂಟು ಮಾಡುವ ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು ದಂಡವನ್ನು ವಸೂಲಿಸಲಾಗುತ್ತಿದೆ. 2017–18, 2018–19 ಮತ್ತು 2019–20 (ಜನವರಿ–2020ರ ಅಂತ್ಯಕ್ಕೆ) ಸಾಲಿನಲ್ಲಿ ಸಾರಿಗೆ ಇಲಾಖೆಯ ವತಿಯಿಂದ ತೆಗೆದುಕೊಳ್ಳಲಾದ ಕ್ರಮಗಳ ವಿವರಗಳು ಕೆಳಕಂಡಂತಿದೆ.

| ವರ್ಷ | ತಪಾಸಿಸಿದ ವಾಹನಗಳು | | ದಾಖಲಾದ ಪ್ರಕರಣಗಳು | | ಅಭಿಯೋಜನೆ ಪ್ರಕರಣಗಳು | ದಂಡ ವಸೂಲಾತಿ |
|---|---|---|---|---|---|---|
| | ಪೆಟ್ರೋಲ್ | ಡೀಸೆಲ್ | ಪೆಟ್ರೋಲ್ | ಡೀಸೆಲ್ | | |
| 2017-18 | 1501630 | 99029 | 45642 | 5570 | 20 | 33132000 |
| 2018-19 | 1629523 | 109343 | 42489 | 6126 | 1 | 31943900 |
| 2019-20 (ಜನವರಿ 2020ರ ಅಂತ್ಯಕ್ಕೆ) | 1421369 | 87404 | 32774 | 4181 | 0 | 37117200 |

ಬೆಂಗಳೂರು ನಗರದಲ್ಲಿ ಏರುತ್ತಿರುವ ವಾಯು ಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಪ್ರೋತ್ಸಾಯಿಸಲು ಬೆಸ್ಕಾಂ ಸಹಯೋಗದೊಂದಿಗೆ 100 ಎ.ಸಿ. ಚಾರ್ಜಿಂಗ್ ಸ್ಟೇಷನ್‌ಗಳನ್ನು ಸುಮಾರು 80 ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

| | | |
|---|---|---|
| ಇ) | ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ. ವಾಹನಗಳು ಯಥೇಚ್ಛವಾಗಿ ಆರೋಗ್ಯಕ್ಕೆ ಹಾನಿಕರವಾದ ಹೊಗೆ ಬಿಡುತ್ತಿದ್ದು, ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ: | **ಕ.ರಾ.ರ.ಸಾ.ನಿಗಮದ** ಎಲ್ಲಾ ವಾಹನಗಳನ್ನು ವಿಭಾಗಗಳ/ಘಟಕ ಮಟ್ಟದಲ್ಲಿ ಹೊಗೆ ತಪಾಸಣೆಯನ್ನು ಪ್ರತಿ ತಿಂಗಳು ಪರಿಶೀಲಿಸುವ ಕ್ರಮ ಜಾರಿಯಲ್ಲಿರುತ್ತದೆ. ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಹೊಗೆ ಸೂಸುವ ವಾಹನಗಳಿದ್ದಲ್ಲಿ, ಕೂಡಲೇ ಆ ವಾಹನಗಳನ್ನು ಕಾರ್ಯಾಚರಣೆಯಿಂದ ಹಿಂಪಡೆದು ಇಂಜಿನ್ ನಿರ್ವಹಣೆ ಅಥವಾ ಮರು ಒಪ್ಪಗೊಳಿಸಿ, ಮತ್ತೊಮ್ಮೆ ವಾಹನಗಳ ತಪಾಸಣೆ ಮಾಡಿ, ನಿಗದಿತ ಪ್ರಮಾಣಕ್ಕಿಂತ ಕಡಿಮೆ ಇರುವುದನ್ನು ಖಚಿತಪಡಿಸಿಕೊಂಡ ನಂತರ ಕಾರ್ಯಾಚರಣೆಗೆ ನಿಯೋಜಿಸಲಾಗುತ್ತದೆ.<br><br>ಕ.ರಾ.ರ.ಸಾ.ನಿಗಮವು ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ 01.04.2020 ರ ನಂತರ BS-6 ಮಾದರಿಯ ವಾಹನಗಳನ್ನು ಆಚರಣೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ ಹಾಗೂ ವಿದ್ಯುತ್ ಚಾಲಿತ ವಾಹನಗಳನ್ನು ಕಾರ್ಯಾಚರಿಸಲು ಕ್ರಮ ಜಾರಿಯಲ್ಲಿರುತ್ತದೆ.<br><br>**ಬೆಂ.ಮ.ಸಾ.ಸಂಸ್ಥೆಯ** ಎಲ್ಲಾ ಬಸ್ಸುಗಳಲ್ಲಿ ಹೊಗೆ ಸೂಸುವಿಕೆಯ ಸಾಂದ್ರತೆಯು ನಿಗದಿತ ಮಟ್ಟಕ್ಕಿಂತಲೂ ಕಡಿಮೆ ಇರುವಂತೆ ಉತ್ತಮವಾಗಿ ತಾಂತ್ರಿಕ ನಿರ್ವಹಣೆ ಮಾಡಲಾಗುತ್ತಿದೆ.<br><br>ಆದಾಗ್ಯೂ, ಸಂಸ್ಥೆಯ ಬಸ್ಸುಗಳಿಂದ ವಾಯು ಮಾಲಿನ್ಯ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. ಎಲ್ಲಾ ಘಟಕಗಳಲ್ಲಿ ಆಚರಣೆಯಲ್ಲಿರುವ ವಾಹನಗಳನ್ನು ಪ್ರತಿ ತಿಂಗಳು ಆಧುನಿಕ ಹೊಗೆ ತಪಾಸಣೆ ಯಂತ್ರವನ್ನು ಬಳಸಿ ಹೊಗೆ ತಪಾಸಣೆಗೆ ಒಳಪಡಿಸಲಾಗುತ್ತಿದ್ದು ಹಾಗೂ ಹೆಚ್ಚು ಹೊಗೆ ಸೂಸುವ ವಾಹನಗಳನ್ನು ದುರಸ್ಥಿ ಪಡಿಸಿದ ನಂತರವಷ್ಟೆ ಕಾರ್ಯಾಚರಣೆ ಮಾಡಲಾಗುತ್ತದೆ.<br>2. ವಾಯು ಮಾಲಿನ್ಯ ನಿಯಂತ್ರಿಸಲು ಕೇಂದ್ರ ಮೋಟಾರ್ ವಾಹನ ನಿಯಮ 115 (2) 1989 ಪ್ರಕಾರ ಬಿ.ಎಸ್-2/3 ಬಸ್ಸುಗಳಿಗೆ ಪ್ರತಿ ಆರು ತಿಂಗಳಿಗೊಮ್ಮೆ ಹಾಗೂ ಬಿ.ಎಸ್.-4 ಬಸ್ಸುಗಳಿಗೆ ಪ್ರತಿ ಒಂದು ವರ್ಷಗಳಿಗೆ ಆನ್‌ಲೈನ್ ಮುಖೇನ ಹೊಗೆ ತಪಾಸಣೆಯನ್ನು ಮಾಡಲಾಗುತ್ತಿದೆ.<br>3. ಬೆಂ.ಮ.ಸಾ.ಸಂಸ್ಥೆಯ ಆಯ್ದ ಟಿ.ಟಿ.ಎಂ.ಸಿ. ಮತ್ತು ಪ್ರಮುಖ ಬಸ್ ನಿಲ್ದಾಣಗಳಲ್ಲಿ ಅನಿರೀಕ್ಷಿತ ಹೊಗೆ ತಪಾಸಣೆಗೆ ನಡೆಸಿ ಹೆಚ್ಚು ಹೊಗೆ ಹೊರ ಸೂಸುವ ವಾಹನಗಳು ಕಂಡುಬಂದಲ್ಲಿ ದುರಸ್ಥಿಗೆ ಒಳಪಡಿಸಲು ಕೂಡಲೇ ಘಟಕಕ್ಕೆ ಕಳುಹಿಸಿ, ದುರಸ್ಥಿಯ ನಂತರವಷ್ಟೆ ಮಾರ್ಗಾಚರಣೆಗೆ ನೀಡಲಾಗುತ್ತಿದೆ.<br><br>ಪ್ರತಿ ವರ್ಷ ಜೂನ್-05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಣೆ ಮಾಡುವ ಮೂಲಕ ಸಂಸ್ಥೆಯ ಸಿಬ್ಬಂದಿ, ಪ್ರಯಾಣಿಕರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>ನಿಗಧಿತ ಪ್ರಮಾಣಕ್ಕಿಂತ ಹೆಚ್ಚು ಹೊಗೆ ಹೊರಸೂಸುವ ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ವಾಹನಗಳನ್ನು ಸಹ ಪ್ರವರ್ತನ ಸಮಯದಲ್ಲಿ ತಪಾಸಣೆ ನಡೆಸಿ ನಿಯಮಾನುಸಾರ ಕ್ರಮಕ್ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಈ) | ಆಟೋ, ಟ್ಯಾಕ್ಸಿ ಮುಂತಾದ ಸಾರ್ವಜನಿಕ ವಾಹನಗಳಿಂದ ಯಥೇಚ್ಛವಾಗಿ ಕಪ್ಪು ಹೊಗೆ ಬರುವುದನ್ನು ನಿಯಂತ್ರಿಸಲು ಸರ್ಕಾರ ಹಾಗೂ ಇಲಾಖೆ ಯಾವ ಕ್ರಮಗಳನ್ನು ಕೈಗೊಂಡಿದೆ: | ಕರ್ನಾಟಕ ಮೋಟಾರು ವಾಹನ ನಿಯಮಾವಳಿ, 1989ರ 231–ಬಿ ಪ್ರಕಾರ ಬೆಂಗಳೂರು ನಗರದಲ್ಲಿ 415 ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ತೆರೆಯಲು ಅನುಮತಿಸಲಾಗಿರುತ್ತದೆ, ಹೊಸದಾಗಿ ನೋಂದಣಿಯಾದ ವಾಹನಗಳಿಗೆ 01 ವರ್ಷದ ಅವಧಿಗೆ ವಾಯುಮಾಲಿನ್ಯ ನಿಯಂತ್ರಣ ಪ್ರಮಾಣಪತ್ರದಿಂದ ವಿನಾಯಿತಿ ಇರುತ್ತದೆ. ನಂತರ ಎಲ್ಲಾ ಬಿಎಸ್–3 ಮತ್ತು ಬಿಎಸ್–4 ಮಾದರಿಯ ವಾಹನಗಳಿಗೂ ಪಿಯುಸಿ ಪ್ರಮಾಣಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. ಹಾಗೂ ಬಿಎಸ್–4 ಮಾದರಿಯ ಹೊಂದಿರುವ ವಾಹನಗಳಿಗೆ 12 ತಿಂಗಳುಗಳ ಅವಧಿಗೆ ವಾಯುಮಾಲಿನ್ಯ ತಪಾಸಣಾ ಪ್ರಮಾಣಪತ್ರಗಳನ್ನು ವಿತರಿಸಲಾಗುತ್ತದೆ. ಇದಲ್ಲದೆ, ಬೆಂಗಳೂರು ನಗರದಲ್ಲಿ ಸಂಚರಿಸುವ 2–ಸ್ಟ್ರೋಕ್ ಆಟೋರಿಕ್ಷಾಗಳಿಗೆ ದಿನಾಂಕ:31–03–2020ರ ಅವಧಿಗೆ ಮಾತ್ರ ರಸ್ತೆಗಳಲ್ಲಿ ಸಂಚರಿಸಲು ಅನುಮತಿಸಲಾಗಿರುತ್ತದೆ. |
| ಉ | ಸಾರ್ವಜನಿಕ ವಾಹನಗಳಾದ ಕೆ.ಎಸ್.ಆರ್.ಟಿ.ಸಿ, ಬಿ.ಎಂ.ಟಿ.ಸಿ, ಆಟೋ, ಟ್ಯಾಕ್ಸಿ ಮುಂತಾದ ವಾಹನಗಳ ಚಾಲಕರು ಮೊಬೈಲ್‌ನಲ್ಲಿ ಮಾತನಾಡಿಕೊಂಡು ಚಾಲನೆ ಮಾಡುತ್ತಿರುವುದರಿಂದ ಅಪಘಾತಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ಮಾಹಿತಿ ನೀಡುವುದು) | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸಾರ್ವಜನಿಕ ವಾಹನಗಳಾದ ಕೆ.ಎಸ್.ಆರ್.ಟಿ.ಸಿ, ಬಿ.ಎಂ.ಟಿ.ಸಿ., ಆಟೋ ಟ್ಯಾಕ್ಸಿ ಮುಂತಾದ ವಾಹನಗಳ ಚಾಲಕರು ಮೊಬೈಲ್‌ನಲ್ಲಿ ಮಾತನಾಡಿಕೊಂಡು ಚಾಲನೆ ಮಾಡುತ್ತಿರುವ ಬಗ್ಗೆ ಪ್ರವರ್ತನ ಸಮಯದಲ್ಲಿ ತಪಾಸಣೆ ನಡೆಸಿ ದಂಡ ವಸೂಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. |

ಟಿಡಿ 40 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು